ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉನಿ : ಸುಮಪ : 2018–19 :** **ದಿನಾಂಕ : 28–09–2018**

# ಮಾಧ್ಯಮದವರ ಗಮನಕ್ಕೆ

**ರಾಜಭವನದಲ್ಲಿ ಅಕ್ಟೋಬರ್ 2 ರಂದು ನಡೆಯಲಿರುವ ಗಾಂಧಿ ಜಯಂತಿ ಅಂಗವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮದ ವರದಿಗಾಗಿ ಮಾಧ್ಯಮ ಪ್ರತಿನಿಧಿಗಳು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಯಲ್ಲಿ ಅಕ್ಟೋಬರ್ 1 ರಂದು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 4.00 ಗಂಟೆಯೊಳಗಾಗಿ ಪ್ರವೇಶ ಪತ್ರಗಳನ್ನು ಪಡೆಯಬಹುದಾಗಿದೆ.**

**ರಾಜ್ಯ ಮತ್ತು ರಾಷ್ಟ್ರಮಟ್ಟದ ಮಾಧ್ಯಮ ಸಂಸ್ಥೆಗಳ ಮಾನ್ಯತೆ ಹೊಂದಿರುವ ತಲಾ ಇಬ್ಬರಿಗೆ ( ವರದಿಗಾರ ಹಾಗೂ ಛಾಯಾಗ್ರಾಹಕ ) ಮಾತ್ರ ಪ್ರವೇಶ ಪತ್ರವನ್ನು ನೀಡಲಾಗುವುದು.**

**ನಿರ್ದೇಶಕರ ಪರವಾಗಿ**

# ಪತ್ರಿಕಾ ಆಮಂತ್ರಣ

1. ಬೃಹತ್ ಉದ್ಯೋಗ ಮೇಳ:

ಉದ್ಘಾಟನೆ:
ಹೆಚ್.ಡಿ. ಕುಮಾರಸ್ವಾಮಿ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ:
ಉದಯ್ ಬಿ. ಗರುಡಾಚಾರ್,
ಶಾಸಕರು, ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರ

ಮುಖ್ಯ ಅತಿಥಿಗಳು:
ಡಾ: ಜಿ. ಪರಮೇಶ್ವರ್,
ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಆರ್.ವಿ. ದೇಶಪಾಂಡೆ,

ಕಂದಾಯ ಸಚಿವರು

ಕೆ.ಜಿ. ಜಾರ್ಜ್,
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕೃಷ್ಣ ಬೈರೇಗೌಡ,
ಗ್ರಾಮೀಣಾಭಿವೃದ್ಧಿ ಸಚಿವರು

ವೆಂಕಟರಮಣಪ್ಪ
ಕಾರ್ಮಿಕ ಸಚಿವರು

ಬಿ. ಝಡ್. ಜಮೀರ್ ಅಹಮದ್ ಖಾನ್,
ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವರು

ಡಾ: ಜಯಮಾಲ ರಾಮಚಂದ್ರ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ಸ್ಥಳ: ನ್ಯಾಷನಲ್ ಕಾಲೇಜು ಮೈದಾನ, ಬಸವನಗುಡಿ, ಬೆಂಗಳೂರು
ದಿನಾಂಕ:29-09-2018 ಶನಿವಾರ ಸಮಯ: ಬೆಳಿಗ್ಗೆ: 9-00 ಗಂಟೆಗೆ
(ಉದ್ಯೋಗ ಮೇಳವನ್ನು ಸೆಪ್ಟೆಂಬರ್ 29 ಹಾಗೂ 30ರಂದು ಹಮ್ಮಿಕೊಳ್ಳಲಾಗಿದೆ)

2. ಸರ್ಕಾರಿ ಶಾಲೆಗಳ ಸಬಲೀಕರಣಕ್ಕಾಗಿ ಹಳೆಯ ವಿದ್ಯಾರ್ಥಿಗಳ ಸಂಘದ ರಾಯಭಾರಿಗಳ ಸಮಾವೇಶ ಕಾರ್ಯಕ್ರಮ"

ಉದ್ಘಾಟನೆ:

ಎನ್. ಮಹೇಶ್,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅಧ್ಯಕ್ಷತೆ:
ಡಾ. ಜಿ. ಪರಮೇಶ್ವರ್, ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 29-09-2018, ಶನಿವಾರ ಸಮಯ: ಬೆಳಿಗ್ಗೆ 12.00 ಗಂಟೆಗೆ.
ಸ್ಥಳ: ಕಾವೇರಿ ಭವನ ಎದುರು ಕೆ.ಜೆ. ರಸ್ತೆ, ಬೆಂಗಳೂರು.

3. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವತಿಯಿಂದ ತಿಂಗಳ ಕಾರ್ಯಕ್ರಮ:

ಸ್ವಾಗತ ಮತ್ತು ಪ್ರಸ್ತಾವನೆ:
ಎಚ್. ದಂಡಪ್ಪ,

ಉಪನ್ಯಾಸ:
ಎಸ್. ದಿವಾಕರ್.

ದಿನಾಂಕ: 29-09-2018, ಶನಿವಾರ ಸಮಯ: ಸಂಜೆ 5.30 ಗಂಟೆಗೆ.

ಸ್ಥಳ: ರವೀಂದ್ರ ಕಲಾಕ್ಷೇತ್ರದಮಹಿಳಾ ವಿಶ್ರಾಂತಿ ಕೊಠಡಿ, ಬೆಂಗಳೂರು.

# ಪತ್ರಿಕಾ ಪ್ರಕಟಣೆ

ಸಂಖ್ಯೆ:1060/1160

## ಬೆಂಗಳೂರು ಮಹಾ ಪೌರರಾಗಿ ಗಂಗಾಂಬಿಕೆ ಉಪ ಮಹಾ ಪೌರರಾಗಿ ರಮೀಳಾ ಉಮಾಶಂಕರ್ ಆಯ್ಕೆ

**ಬೆಂಗಳೂರು, ಸೆಪ್ಟೆಂಬರ್ 28 (ಕರ್ನಾಟಕ ವಾರ್ತೆ)**

**ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯ ಮಹಾ ಪೌರರಾಗಿ ಜಯನಗರ ವಾರ್ಡ್ 153 ರ ಸದಸ್ಯೆ ಗಂಗಾಂಬಿಕೆ ಮಲ್ಲಿಕಾರ್ಜುನ ಹಾಗೂ ಉಪ ಮಹಾ ಪೌರರಾಗಿ ಕಾವೇರಿ ಪುರ ವಾರ್ಡ್‌ನ ರಮೀಳಾ ಉಮಾಶಂಕರ್ ಅವರು ಇಂದು ಆಯ್ಕೆಯಾದರು.**

**ಇಂದು ನಡೆದ ಚುನಾವಣೆಯಲ್ಲಿ ಗಂಗಾಂಬಿಕೆ ಮಲ್ಲಿಕಾರ್ಜುನ ಅವರು 130 ಮತಗಳನ್ನು ಉಪ ಮಹಾ ಪೌರರಾದ ರಮೀಳಾ ಉಮಾಶಂಕರ್ ಅವರು 129 ಮತಗಳನ್ನು ಪಡೆಯುವ ಮೂಲಕ ಆಯ್ಕೆಯಾದರು.**

**ಮಹಾನಗರ ಪಾಲಿಕೆಯ ಚುನಾಯಿತ ಸದಸ್ಯರು ಒಟ್ಟು 198, ರಾಜ್ಯ ವಿಧಾನ ಸಭಾ ಸದಸ್ಯರು 9, ಲೋಕಸಭಾ ಸದಸ್ಯರು 5, ವಿಧಾನ ಪರಿಷತ್ ಸದಸ್ಯರು 19, ವಿಧಾನ ಸಭಾ ಸದಸ್ಯರು 28 ಒಟ್ಟು 259 ಸದಸ್ಯರು ಈ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿದ್ದರು.**

ಇಂದು ಬೆಳಿಗ್ಗೆ ಜರುಗಿದ ಚುನಾವಣೆಯಲ್ಲಿ ಸದಸ್ಯರು ಕೈಯೆತ್ತುವ ಹಾಗೂ ಸಹಿ ಮಾಡುವ ಮೂಲಕ ಪರ ಹಾಗೂ ವಿರೋದದ ಮತ ಚಲಾಯಿಸುವ ಮೂಲಕ ಸದಸ್ಯರು ಮಹಾಪೌರರನ್ನು ಹಾಗೂ ಉಪ ಮಹಾ ಪೌರರನ್ನು ಆಯ್ಕೆ ಮಾಡಲಾಯಿತು.

ಕೇಂದ್ರ ಸಚಿವರಾದ ಅನಂತ್‌ಕುಮಾರ್ ಹಾಗೂ ನಿರ್ಮಲ ಸೀತಾರಾಮನ್ ಅವರು ಗೈರು ಹಾಜರಾಗಿದ್ದರು. ಪ್ರಾದೇಶಿಕ ಆಯುಕ್ತರು ಹಾಗೂ ಚುನಾವಣಾಧಿಕಾರಿಗಳಾಗಿದ್ದ ಶಿವಯೋಗಿ ಕಳಸದ್, ಬಿ.ಬಿ.ಎಂ ಪಿ. ಆಯುಕ್ತ ಎನ್. ಮಂಜುನಾಥ್ ಪ್ರಸಾದ್, ಬೆಂಗಳೂರು ನಗರ ಜಿಲ್ಲಾಧಿಕಾರಿ ಬಿ. ಎಂ. ವಿಜಯಶಂಕರ್ ಅವರು ಚುನಾವಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದರು.

ಸಂಪೂರ್ಣ ಚುನಾವಣಾ ಪ್ರಕ್ರಿಯೆಯನ್ನು ಇದೇ ಮೊದಲ ಬಾರಿಗೆ ವೆಬ್‌ಕಾಸ್ಟ್ ಲೈವ್ ಮೂಲಕ ನೇರವಾಗಿ ಪ್ರಸಾರ ಮಾಡಲಾಯಿತು.

ಬಹಳ ವರ್ಷಗಳ ನಂತರ ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆಯ ಮಹಾ ಪೌರರಾಗಿ ಹಾಗೂ ಉಪ ಮಹಾ ಪೌರರಾಗಿ ಮಹಿಳೆಯರೇ ಆಯ್ಕೆಯಾಗಿರುವುದು ವಿಶೇಷವಾಗಿದೆ.

ಸಂಖ್ಯೆ:1061/1161

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಸೆಪ್ಟೆಂಬರ್ 28 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಅಬಕಾರಿ ಇಲಾಖೆಯಲ್ಲಿನ 145+32 ಹೈ.ಕ. ಒಟ್ಟು 177 ಅಬಕಾರಿ ಉಪನಿರೀಕ್ಷಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳನ್ನು ತಾತ್ಕಾಲಿಕ ಆಯ್ಕೆಪಟ್ಟಿಯ ಅಧಿಸೂಚನೆಯನ್ನು ಆಯೋಗದ ವೆಬ್‌ಸೈಟ್ http://kpsc.kar.nic.in.-Lists-Provisional selection list ರಡಿಯಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ತಾತ್ಕಾಲಿಕ ಆಯ್ಕೆಪಟ್ಟಿಯ ಕುರಿತಂತೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 07 ದಿವಸಗಳೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 01 ಇವರಿಗೆ ಲಿಖಿತ ಮೂಲಕ ಸಲ್ಲಿಸಲು ಸೂಚಿಸಿದೆ. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಸಂಖ್ಯೆ:1062/1162

## ಸಾರಿಗೆ ಸೌಕರ್ಯಗಳ ವ್ಯವಸ್ಥೆ ಕುರಿತು ಅಹವಾಲುಗಳ ಆಲಿಕೆ

ಬೆಂಗಳೂರು, ಸೆಪ್ಟೆಂಬರ್ 28 (ಕರ್ನಾಟಕ ವಾರ್ತೆ)

ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಬೆಂ (ಗ್ರಾ) ಹಾಗೂ ಜಿಲ್ಲಾಧಿಕಾರಿಗಳು ಬೆಂಗಳೂರು (ಗ್ರಾಮಾಂತರ) ರವರ ಸಭಾಂಗಣ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು ಇಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಬೆಂಗಳೂರು ಗ್ರಾಮಾಂತರ ಸಭೆ ಅಕ್ಟೋಬರ್ 6 ರಂದು ಬೆಳಿಗ್ಗೆ 10.30 ಗಂಟೆಗೆ ನಡೆಯಲಿದೆ.

ಈ ಸಭೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದ ಸಾರಿಗೆ ಸೌಕರ್ಯಗಳ ವ್ಯವಸ್ಥೆಯ ಕುರಿತು ಬರುವ ಅಹವಾಲುಗಳ ಆಲಿಕೆ ಮತ್ತು ಮಜಲು ವಾಹನ ರಹದಾರಿಗಳ ಅರ್ಜಿಗಳ ಕುರಿತು ಚರ್ಚಿಸಲಾಗುವುದು. ಆಸಕ್ತಿವುಳ್ಳವರು ಈ ಸಭೆಯಲ್ಲಿ ಭಾಗವಹಿಸಬಹುದಾಗಿದೆ.

ಸಂಖ್ಯೆ:1063/1163

## ಸಚಿವರ ಪ್ರವಾಸ

ಬೆಂಗಳೂರು, ಸೆಪ್ಟೆಂಬರ್ 28 (ಕರ್ನಾಟಕ ವಾರ್ತೆ)

ಕೃಷಿ ಸಚಿವ ಎನ್. ಹೆಚ್. ಶಿವಶಂಕರ ರೆಡ್ಡಿ ಅವರು ಸೆಪ್ಟೆಂಬರ್ 28 ರಿಂದ 30 ರವರೆಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ಸೆಪ್ಟೆಂಬರ್ 30 ರಂದೇ ನಗರಕ್ಕೆ ಹಿಂತಿರುಗಲಿದ್ದಾರೆ.

ಸಂಖ್ಯೆ:1064/1164

## ಎಸಿಬಿ ದಾಳಿ

**ಬೆಂಗಳೂರು, ಸೆಪ್ಟೆಂಬರ್ 27 (ಕರ್ನಾಟಕ ವಾರ್ತೆ)**

**ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ರಾಮಸಾಗರ ಗ್ರಾಮದ ನಿವಾಸಿಯಾಗಿರುವ ಫಿರ್ಯಾದುದಾರರು ಆನೇಕಲ್ ತಹಸೀಲ್ದಾರ್ ರವರ ಕಛೇರಿಗೆ ತಮ್ಮ ಪಿತ್ರಾರ್ಜಿತ ಜಮೀನಿನ ಖಾತೆ ಮಾಡಿಕೊಡಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಶ್ರೀ.ಮುರಳಿ, ಗ್ರಾಮ ಲೆಕ್ಕಿಗರು, ರಾಮಸಾಗರ, ಆನೇಕಲ್**

**ತಾಲ್ಲೂಕು ರವರು ಅರ್ಜಿದಾರರ ಜಮೀನಿನ ಖಾತೆ ಮಾಡಿಕೊಡಲು ರೂ.20,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.**

**ದಿನಾಂಕ:28/09/2018 ರಂದು ಶ್ರೀ.ಮುರಳಿ, ಗ್ರಾಮ ಲೆಕ್ಕಿಗರು, ರಾಮಸಾಗರ ರವರು ರೂ.20,000/- ಲಂಚದ ಹಣವನ್ನು ಫಿರ್ಯಾದುದಾರರಿಂದ ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಬೆಂಗಳೂರು ಗ್ರಾಮಾಂತರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.**

ಸಂಖ್ಯೆ:1065/1165

## ACB Raid

**Bengaluru, September 28 (Karnataka Information)**

A resident of Ramasagar Village, Anekal Taluq had sought for Khata for his Ancestral Property at Anekal Tahsildar office. Shri.Murali, Village Accountant, Ramasagar had demanded a bribe amount of Rs.20,000/- to do the same.

On 28.09.2018 the officials of Bengaluru Rural Anti Corruption Bureau PS trapped and arrested Shri.Murali while accepting bribe amount of Rs.20,000/- from the complainant. The bribe amount has been seized. The Case is under Investigation says official press release.